# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 209 | Pages. 2 | Date: 28-06-2025, SATURDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 209 - ಪುಟಗಳು : 2 - 28 ಜೂನ್ 2025 ಶನಿವಾರ | Ph: 8762954248 | ದರ : ₹1


# ಇತಿಹಾಸ ಸ್ಮರಿಸುವ ಕೆಲಸ ಮಾಡಿದ ಕೆಂಪೇಗೌಡ

## ಆದಿಚುಂಚನಗಿರಿ ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಬಣ್ಣನೆ | ನಾಡಪ್ರಭು ಜಯಂತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬೆಂಗಳೂರು ನಿರ್ಮಾತೃ ಕೆಂಪೇಗೌಡ ಇತಿಹಾಸ ನೆನಪಿನಲ್ಲಿಟ್ಟುಕೊಳ್ಳುವಂತಹ ಕೆಲಸ ಮಾಡಿದ್ದಾರೆ.

ಪೋಷಕರು ಮಕ್ಕಳಿಗೆ ದಾರ್ಶನಿಕರ ಕಥೆಗಳನ್ನು ಹೇಳುವ ಮೂಲಕ ವಿಶೇಷ ಸಾಧಕರ ಬೆಳೆಸಬೇಕು ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಒಕ್ಕಲಿಗರ ಸಂಘದಿಂದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶುಕ್ರವಾರ ಏರ್ಪಡಿಸಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ರಾಜನಾಗಿ ಕೀರಿಟ ಧರಿಸಿ ಅರಮನೆಯಲ್ಲಿರಬೇಕಿದ್ದ ಕೆಂಪೇಗೌಡರು ದೀನದಲಿತರು, ಬಡವರ ಏಳಿಗೆಗಾಗಿ ಶ್ರಮಿಸಿದ್ದರಿಂದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ತಂದೆ-ತಾಯಿ ಸಂಸ್ಕಾರ ಕಲಿಸಿದರೆ ಮಕ್ಕಳು ದೊಡ್ಡವರಾದ ಮೇಲೆ ಏನು ಸಾಧನೆ ಮಾಡುತ್ತಾರೆಂಬುದಕ್ಕೆ ಕೆಂಪೇಗೌಡ ಸಾಕ್ಷಿ. ಜನರ ಹಿತಕ್ಕಾಗಿ ಏನಾದರೂ ಕೆಲಸ ಮಾಡಬೇಕೆಂದು ಬಯಸಿದ ಅವರು ಬೆಂಗಳೂರು ಮಹಾನಗರ ನಿರ್ಮಿಸಿದರು. ಜಗತ್ತು ಇವತ್ತು ಬೆಂಗಳೂರು ಕಡೆಗೆ ತಿರುಗಿ ನೋಡುತ್ತಿದೆ ಎಂದರೆ ಅದಕ್ಕೆ ಕೆಂಪೇಗೌಡರ ಕೊಡುಗೆ ಸಾಕಷ್ಟಿದೆ ಎಂದರು.



ಬಡತನ ಮನುಷ್ಯನಿಗೆ ಬರಬೇಕು ಹೊರತು ಮನಸಿಗಲ್ಲ. ಶ್ರೀಮಂತಿಕೆ ಹೃಯದಕ್ಕೆ ಬರಬೇಕೆ ವಿಹಃ ತಲೆಗೆ ಅಲ್ಲ. ನಮ್ಮ ಸಾಧನೆಗೆ ಬಡತನ ಅಡ್ಡಿಯಾಗಬಾರದು. ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತರಾಗಿದ್ದ ಕೆಂಪೇಗೌಡರು ಅದೇ ಮಾದರಿಯಲ್ಲಿ ಸಾಮ್ರಾಜ್ಯ ಕಟ್ಟಿದರು.

ಈ ಬಗ್ಗೆ ಅವರು ಬಾಲ್ಯದಲ್ಲೇ ಕನಸು ಕಂಡಿದ್ದರು. ದೊಡ್ಡವರಾದ ಬಳಿಕ ಅದೇ ನಿಟ್ಟಿನಲ್ಲಿ ಪ್ರಯತ್ನಿಸಿ ಜಗತ್ತು ತಿರುಗಿ ನೋಡುವಂತೆ ಮಾಡಿದ್ದಾರೆ.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಬೆಂಗಳೂರಿನಲ್ಲಿ ಕೆರೆಕಟ್ಟೆ, ದೇವಸ್ಥಾನ, ಕೋಟೆ, ಪೇಟೆಗಳನ್ನು ನಿರ್ಮಿಸಿದ ಕೆಂಪೇಗೌಡರು ನಮಗೆ ಆದರ್ಶಪ್ರಾಯ. ಜಗತ್ತು ನಿಬ್ಬೆರಗಾಗುವಂತೆ ನಗರವನ್ನು ಕಟ್ಟಿದ ಮಹಾನ್ ವ್ಯಕ್ತಿಯ ಸ್ಮರಣೆ ಸ್ತುತ್ಯಾರ್ಹ. ಜನರ ಅಭಿವೃದ್ಧಿಗಾಗಿ ಅವರು ಕೆರೆಕಟ್ಟೆಗಳನ್ನು ನಿರ್ಮಿಸಿದರೆ ನಾವು ಸ್ಮಶಾನ ಜಾಗವನ್ನು ಬಿಡದೆ ಒತ್ತುವರಿ ಮಾಡುತ್ತಿದ್ದೇವೆ. ಅಭಿವೃದ್ಧಿಯ ಪರಿಕಲ್ಪನೆ ಹೇಗಿರಬೇಕು ಎಂಬುದಕ್ಕೆ ಕೆಂಪೇಗೌಡ ಸಾಕ್ಷಿ ಎಂದರು.

### ನಗರದಲ್ಲಿ ಆಕರ್ಷಕ ಮೆರವಣಿಗೆ

ಕೆಂಪೇಗೌಡ ಜಯಂತಿ ಅಂಗವಾಗಿ ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಹಾಸನಾಂಬ ಕಲಾಕ್ಷೇತ್ರದ ವರೆಗೆ ಅದ್ಧೂರಿ ಮೆರವಣಿಗೆ ಏರ್ಪಡಿಸಲಾಗಿತ್ತು. ಬೆಳ್ಳಿ ಸಾರೋಟಿನಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಶಾಸಕ ಹೆಚ್.ಪಿ. ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಪುಷ್ಪಾರ್ಚನೆ ಮಾಡಿದರು. ವಿವಿಧ ಕಲಾತಂಡಗಳು ಮೆರವಣಿಗೆಗೆ ಕಳೆ ತಂದವು. ದಾರಿಯುದ್ದಕ್ಕೂ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.



ಹಾಸನದಲ್ಲಿ ಕೆಂಪೇಗೌಡರ ಕಂಚಿನ ಪುತ್ಥಳಿ ನಿರ್ಮಾಣಕ್ಕೆ ಕ್ರಮ ಕೈಗೊಂಡಿದ್ದು ಶ್ರೀ ಶಂಭುನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಲಾಗುತ್ತಿದೆ.

ಸಕಲೇಶಪುರದಲ್ಲಿ ಕಂಚಿನ ಪುತ್ಥಳಿ ನಿರ್ಮಿಸಿದವರಿಗೆ ಈಗಾಗಲೇ ಮುಂಗಡ ಹಣ ಕೊಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಮಹಿಳಾ ಸಬಲೀಕರಣ, ಕೆರೆ ಕಟ್ಟೆಗಳ ಸಂರಕ್ಷಣೆ, ಬಡವರು ದೀನದಲಿತರ ಏಳಿಗೆಗೆ ಕೆಂಪೇಗೌಡ ಸಾಕಷ್ಟು ಕೆಲಸ ಮಾಡಿದ್ದಾರೆ.

ರಾಜಧಾನಿ ಇಂದು ಗ್ರೇಟರ್ ಬೆಂಗಳೂರು ಆಗಿ ಪರಿವರ್ತನೆ ಆಗಿರುವುದರದಲ್ಲಿ ಕೆಂಪೇಗೌಡರ ಕೊಡುಗೆ ಹೆಚ್ಚಿದೆ. ಭವಿಷ್ಯದ ಪೀಳಿಗೆಗೆ ಕೆಂಪೇಗೌಡರ ತತ್ವಾದರ್ಶಗಳನ್ನು ತಿಳಿಸುವ ಕೆಲಸವಾಗಬೇಕು ಎಂದರು.

ನಿವೃತ್ತ ಪ್ರಾಧ್ಯಾಪಕ ಡಾ. ಮ.ರಾಮಕೃಷ್ಣ ಮಾತನಾಡಿ, ಆತ್ಮವಿಶ್ವಾಸದಿಂದ ಮುನ್ನುಗ್ಗಿದರೆ ಏನನ್ನೂ ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಕೆಂಪೇಗೌಡ ನಿದರ್ಶನ. ನಾಡಿನ ಅಭಿವೃದ್ಧಿಯ ದೂರದೃಷ್ಟಿ ಹೊಂದಿದ್ದ ಅವರು ಬೆಂಗಳೂರನ್ನು ಕಟ್ಟಿದರು ಮಾತ್ರವಲ್ಲದೆ ಅನೇಕ ಜನೋಪಕಾರಿ ಕೆಲಸ ಮಾಡಿದ್ದಾರೆ. ಅಲೆಮಾರಿಗಳಾಗಿದ್ದ ಒಕ್ಕಲಿಗರು ನಂತರ ಬೇಟೆಯಾಡಲು ಶುರುಮಾಡಿದರು. ನಂತರ ಒಂದು ಕಡೆ ನೆಲೆನಿಂತು ಕೃಷಿ ಚಟುವಟಿಕೆ ಕೈಗೊಂಡರು ಎಂದು ವಿವರಿಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘು ಗೌಡ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಮೇಯರ್ ಎಂ. ಚಂದ್ರೇಗೌಡ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿದರು. ಅಪರ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಅಪ್ಪೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ತಾರಾನಾಥ್ ಮತ್ತಿತರರಿದ್ದರು.

ಎಸ್ಎಸ್ಎಲ್ಸಿ ಹಾಗು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

# ಕೆಂಪೇಗೌಡರ ಸಾಧನೆಗೆ ಬೆಂಗಳೂರು ನಗರ ಸಾಕ್ಷಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಇತಿಹಾಸ ತಿಳಿಯದವ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ ಎಂಬುದಕ್ಕೆ ನಾಡಪ್ರಭು ಕೆಂಪೇಗೌಡರು ಐನೂರು ವರ್ಷಗಳ ಹಿಂದೆಯೇ ಮಾಡಿರುವ ಕೆಲಸಗಳೇ ಅದರಲ್ಲೂ ಬೆಂಗಳೂರು ನಗರ ಸಾಕ್ಷಿ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಪಟ್ಟಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯಲ್ಲಿ ಮಾತನಾಡಿ, ರಸ್ತೆ, ಕೆರೆ ಕಟ್ಟೆ ವ್ಯಾಪಾರಕ್ಕೆ ಅನುಕೂಲ ಆಗುವಂತೆ ಬೆಂಗಳೂರು ಅಭಿವೃದ್ಧಿ ಮಾಡಿರುವುದು ಅಜರಾಮರ ಎಂದರು.

ಉಪವಿಭಾಗಾಧಿಕಾರಿ ಡಾ. ಶೃತಿ ಮಾತನಾಡಿ. ಕೋಟ್ಯಾಂತರ ಜನರು ವಾಸ ಮಾಡಲು ಸುಸಜ್ಜಿತ ನಗರವನ್ನು ಕಟ್ಟಿಕೊಟ್ಟ ಕೆಂಪೇಗೌಡರ ಸಾಧನೆ ಶ್ಲಾಘನೀಯ.

ಒಬ್ಬ ವ್ಯಕ್ತಿಯ ಸಾಧನೆಗಳನ್ನು ವರ್ಷಕ್ಕೆ ಒಂದು ಬಾರಿಯಾದರೂ ನೆನಪಿಸಿ ಕೊಳ್ಳುವ ದೃಷ್ಟಿಯಿಂದ ಜಯಂತಿಯನ್ನು ಸರ್ಕಾರ ಆಚರಿಸುತ್ತದೆ ಎಂದರು..

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಮಾತನಾಡಿ, ಸಕಲೇಶಪುರದಲ್ಲಿ ಹೇಮಾವತಿ, ಬುದ್ದ, ಬಸವಣ್ಣ, ಅಂಬೇಡ್ಕರ್ ಹಾಗೂ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡಿದ್ದು ಯುವ ಜನತೆಗೆ ಅವರು ಪ್ರೇರಣೆಯಾಗಬೇಕು. ಕೆಂಪೇಗೌಡ ಪ್ರತಿಮೆ ಮಾಡಿರುವ ಜಾಗ ಮೊದಲು ಡ್ರಗ್ ಮತ್ತು ಅನೈತಿಕ ಚಟುವಟಿಕೆಗಳ ತಾಣವಾಗಿತ್ತು. ಈಗ ಸುಸಜ್ಜಿತ ಜಿಮ್, ಪಾರ್ಕ್ ನಿರ್ಮಾಣ ಮಾಡಿ ಆರೋಗ್ಯ ಕಾಪಾಡಿಕೊಳ್ಳುವ ಉತ್ತಮ ಜಾಗವಾಗಿದೆ ಎಂದರು.

ಕೆಂಪೇಗೌಡರು ಬೆಂಗಳೂರು ನಿರ್ಮಾಣ ಮಾಡಲು ಐದು ವಿಚಾರಗಳಿಗೆ ಆದ್ಯತೆ ನೀಡಿದ್ದರು. ಕೋಟೆ, ಪೇಟೆ, ಕೆರೆ-ಕಟ್ಟೆ, ಗುಡಿ, ರಸ್ತೆ, ಐದು ಕಡೆ ಹೆಬ್ಬಾಗಿಲು ನಿರ್ಮಿಸಿ ವಿದೇಶಿ ವ್ಯಾಪಾರ ಮಾಡಲು ಆಹ್ವಾನಿಸಿದರು. ಬಳೆ ಪೇಟೆ, ಚಿಕ್ಕ ಪೇಟೆ ನಗರ ಪೇಟೆ, ದೋಬಿ ಗಾಟ್, ಕುಂಬಾರ ಪೇಟೆ ಮೊದಲಾದ 54 ಕಸುಬು ಆಧಾರಿತ ಪೇಟೆಗಳನ್ನು ನಿರ್ಮಿಸಿದ್ದರು ಎಂದರು.

# ಸಕ್ಕರೆ ಕಾರ್ಖಾನೆ ಕಾರ್ಯಾರಂಭ: 3,291 ರೂ. ದರ

## ಸಂಸದ ಶ್ರೇಯಸ್ ಪಟೇಲ್ ಪರಿಶೀಲನೆ | 5 ಲಕ್ಷ ಟನ್ ಕಬ್ಬು ಅರೆಯುವ ಗುರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಶ್ರೀನಿವಾಸಪುರ ಹೇಮಾವತಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಪ್ರಕ್ರಿಯೆಗೆ ಶುಕ್ರವಾರದಿಂದ ಚಾಲನೆ ನೀಡಲಾಗಿದ್ದು ಪ್ರತಿ ಟನ್‌ಗೆ 3,291 ರೂ. ದರ ನಿಗದಿಪಡಿಸಲಾಗಿದೆ.

ಕಾರ್ಖಾನೆಗೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ಕಾರ್ಖಾನೆ ಆಡಳಿತ ಮಂಡಳಿ ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಈ ವೇಳೆ ಮಾತನಾಡಿದ ಸಂಸದ ಶ್ರೇಯಸ್ ಪಟೇಲ್, ಕಬ್ಬು ಬೆಳೆಗಾರರಿಗೆ ಬಿಲ್ ಪಾವತಿ ಸೇರಿ ಪಾರದರ್ಶಕ ಕಾರ್ಯ ನಿರ್ವಹಣೆ ಮೂಲಕ ಕಾರ್ಖಾನೆಯನ್ನು ಸುಸಜ್ಜಿತವಾಗಿ ನಡೆಸಿಕೊಂಡು ಹೋಗಬೇಕು ಎಂದು ನಿರ್ದೇಶನ ನೀಡಿದರು.



2024-25ನೇ ಸಾಲಿನಲ್ಲಿ 4.13 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ನುರಿಸಲಾಗಿದೆ. ಕಾರ್ಖಾನೆ ಕ್ಷೇತ್ರ ವ್ಯಾಪ್ತಿಯಲ್ಲಿ 8500 ಎಕರೆ ವಿಸ್ತೀರ್ಣದಲ್ಲಿ ಅಂದಾಜು 4 ಲಕ್ಷ ಟನ್ ಕಬ್ಬು ಲಭ್ಯವಿದ್ದು, ಪಕ್ಕದ ಜಿಲ್ಲೆಗಳಿಂದ ಕಬ್ಬನ್ನು ತರಿಸಿಕೊಂಡು ಈ ವರ್ಷ 5 ಲಕ್ಷ ಟನ್ ಕಬ್ಬು ನುರಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಪದಾಧಿಕಾರಿಗಳು ತಿಳಿಸಿದರು.

ನಿಗದಿತ ಅವಧಿಯೊಳಗೆ ಕಬ್ಬು ಕಟಾವು ಮಾಡಲು ಸಹಾಯವಾಗುವಂತೆ ನೆರೆ ಜಿಲ್ಲೆ ಹಾಗೂ ರಾಜ್ಯದ ಕಟಾವು ಆಳುಗಳಿಗೆ 3.30 ಕೋಟಿ ರೂ. ಹಣವನ್ನು ಮುಂಗಡವಾಗಿ ನೀಡಲಾಗಿದೆ. 150 ಕಬ್ಬು ಕಟಾವು ಮೇಸ್ತ್ರಿಗಳಿಂದ 360 ಕಟಾವು ಗುಂಪುಗಳನ್ನು ಒದಗಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಕಬ್ಬು ಸಾಗಿಸಲು ಕಾರ್ಖಾನೆಗೆ ಅಗ,ತ್ಯಕ್ಕೆ ತಕ್ಕಂತೆ ಲಾರಿ, ಟ್ರ್ಯಾಕ್ಟರ್ ಹಾಗೂ ಎತ್ತಿನ ಬಂಡಿ ನೋಂದಣಿ ಪ್ರಾರಂಭಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕಳೆದ ಸಾಲಿನಲ್ಲಿ ಸರಬರಾಜಾದ ಕಬ್ಬಿಗೆ ಸಕಾಲದಲ್ಲಿ ಸಂಪೂರ್ಣ ಹಣ ಪಾವತಿಸಲಾಗಿದೆ. ದರ ನಿಗದಿಯನ್ನು ಕೇಂದ್ರ ಸರ್ಕಾರವೇ ಮಾಡುವುದರಿಂದ ಈ ವರ್ಷ ಪ್ರತಿ ಟನ್‌ಗೆ 3,291 ರೂ. ನಿಗದಿಪಡಿಸಲಾಗಿದೆ.

ಕಬ್ಬು ಕಟಾವು ಮುಗಿದ 30 ದಿನಗಳೊಳಗೆ ಬೆಳೆಗಾರರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ. ಕಾರ್ಖಾನೆಯು ರೈತರಿಗೆ ಕಬ್ಬಿನ ಬಿತ್ತನೆ ಬೀಜ ಅಥವಾ ಕಬ್ಬಿನ ಸಸಿಗಳನ್ನು ಬಡ್ಡಿರಹಿತ ಸಾಲ ರೂಪದಲ್ಲಿ ನೀಡುತ್ತಿದೆ. ಕಬ್ಬಿನ ಸಸಿ ನಾಟಿ ಮಾಡಲು ಇಚ್ಛಿಸುವ ರೈತರಿಗೆ ಸಸಿಗಳ ಸಾಗಾಣಿಕೆಗೆ ತಗಲುವ ಸಾಗಾಣಿಕ ವೆಚ್ಚವನ್ನು ಕಾರ್ಖಾನೆಯಿಂದ ಒದಗಿಸಲಾಗುವುದು. ಕಬ್ಬಿನ ಬೆಳೆಗೆ ಸಮತೋಲನ ಗೊಬ್ಬರವನ್ನು ಒದಗಿಸಲಾಗುವುದು. ಪ್ರತಿ ಎಕರೆಗೆ 20 ಕೆ.ಜಿ. ಸಸ್ಯ ಪೋಷಕಾಂಶ ರಸಗೊಬ್ಬರವನ್ನು 50 ರೂ. ಸಬ್ಸಿಡಿಯಲ್ಲಿ ರೈತರಿಗೆ ಒದಗಿಸಲಾಗುವುದು ಎಂದರು.

# ಪತ್ರಕರ್ತರಿಗೆ ಕೆಸರುಗದ್ದೆ ಆಟೋಟ ಸ್ಪರ್ಧೆ ಇಂದು



ಹಾಸನ: ಪತ್ರಿಕಾ ದಿನಾಚರಣೆ ಅಂಗವಾಗಿ ಜಿಲ್ಲಾ ಹಾಗೂ ಆಲೂರು ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಲೂರು ತಾಲ್ಲೂಕಿನ ಬ್ಯಾಡರಹಳ್ಳಿಯಲ್ಲಿ ಜೂ. 28ರ ಶನಿವಾರ ವರ್ಷದ ಕೆಸರುಗದ್ದೆ ಆಟೋಟ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಹೆಚ್. ವೇಣುಕುಮಾರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಬೆಳಿಗ್ಗೆ 10 ಗಂಟೆಗೆ ಕ್ರೀಡಾಕೂಟದ ಉದ್ಘಾಟನೆಯನ್ನು ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ನೆರವೇರಿಸಲಿದ್ದಾರೆ. ಸಂಸದ ಶ್ರೇಯಸ್ ಪಟೇಲ್, ಮಾಜಿ ಶಾಸಕರಾದ ಎಚ್.ಎಂ. ವಿಶ್ವನಾಥ್, ಹೆಚ್. ಕೆ. ಕುಮಾರಸ್ವಾಮಿ, ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ಮೇಯರ್ ಎಂ.ಚಂದ್ರೇಗೌಡ, ಕೆಯೂಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗುಡೂರು, ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಬಿ ಮದನಗೌಡ, ವಿಶೇಷ ಪ್ರತಿನಿಧಿ ರವಿ ನಾಗಲಗೂಡು ಹಾಗೂ ಇತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಹಗ್ಗ ಜಗ್ಗಾಟ, ವಾಲಿಬಾಲ್, ಕೆಸರುಗದ್ದೆ ಓಟದ ಸ್ಪರ್ಧೆ ಸೇರಿ ಇತರೆ ಕ್ರೀಡೆಗಳು ಜರುಗಲಿವೆ ಎಂದು ಹೇಳಿದರು. ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಟಿ. ಮೋಹನ್ ಕುಮಾರ್, ಕಾರ್ಯದರ್ಶಿಗಳಾದ ಪಿ.ಎ. ಶ್ರೀನಿವಾಸ್, ಸಿ.ಬಿ. ಸಂತೋಷ್ ಇದ್ದರು.

# ಹೃದಯಾಘಾತಕ್ಕೆ ಅಂಬುಲೆನ್ಸ್ ಚಾಲಕ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿದ್ದ ವ್ಯಕ್ತಿ ಕುಳಿತಲ್ಲಿಯೇ ಮೃತಪಟ್ಟಿದ್ದಾರೆ.

ಆಲೂರು ತಾಲ್ಲೂಕು ಬಾವಿಕೊಪ್ಪಲು ಗ್ರಾಮದ ಮಂಜುನಾಥ್ (51) ಮೃತರು. ಅಂಬುಲೆನ್ಸ್ ಚಾಲಕರಾಗಿದ್ದ ಮಂಜುನಾಥ್ ನಗರದ ಪೆನ್ಷನ್ ಮೊಹಲ್ಲಾದಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದರು.




ಗುರುವಾರ ರಾತ್ರಿ ಮನೆಯಲ್ಲಿದ್ದಾಗ ಎದೆ ನೋವು ಕಾಣಿಸಿಕೊಂಡಿದ್ದು ಕುಟುಂಬ ಸದಸ್ಯರು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಇಸಿಜಿ ಪರೀಕ್ಷೆ ಬಳಿಕ ಕುರ್ಚಿ ಮೇಲೆ ಕುಳಿತಿದ್ದ ಅವರು ವೈದ್ಯರ ಆಗಮನಕ್ಕಾಗಿ ಕಾಯುತ್ತಿದ್ದರು. ವೈದ್ಯರು ಬರುವಷ್ಟರಲ್ಲಿ ಮಂಜುನಾಥ್ ಮೃತಪಟ್ಟಿದ್ದರು.

ಈ ಮೂಲಕ ಕಳೆದ ಒಂದು ತಿಂಗಳ ಅವಧಿಯಲ್ಲಿ ಜಿಲ್ಲೆಯಲ್ಲಿ 16 ಮಂದಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

# ವಾಹನ ಡಿಕ್ಕಿಯಾಗಿ ವ್ಯಕ್ತಿ ಸಾವು

ಚನ್ನರಾಯಪಟ್ಟಣ: ಗೂಡ್ಸ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಕೆ. ಕಾಳೇನಹಳ್ಳಿ ಗೇಟ್ ಸಮೀಪ ನಡೆದಿದೆ. ತಾಲ್ಲೂಕಿನ ಮಂಜುನಾಥಪುರ ಗ್ರಾಮದ ನರಸಪ್ಪ ಮೃತರು. ಸಂಜೆ 7 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ-ಶ್ರವಣಬೆಳಗೊಳ ರಸ್ತೆಯ ಕೆ.ಕಾಳೇನಹಳ್ಳಿ ಗೇಟ್ ಸಮೀಪ ಹೋಗುತ್ತಿದ್ದಾಗ ಶ್ರವಣಬೆಳಗೊಳ ಕಡೆಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೆಂಪೇಗೌಡ ಪ್ರತಿಮೆಗೆ ಶಾಸಕರಿಂದ ಮಾಲಾರ್ಪಣೆ



ಸಕಲೇಶಪುರ: ಪಟ್ಟಣದ ನಾಡಪ್ರಭು ಕೆಂಪೇಗೌಡ ಪ್ರತಿಮೆ ಬಳಿ ಹಮ್ಮಿಕೊಂಡಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಶಾಸಕ ಸಿಮೆಂಟ್ ಮಂಜು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಕನ್ನಡದ ಗರ್ವದ ಚಿಹ್ನೆ. ಬೆಂಗಳೂರು ನಗರ ನಿರ್ಮಿಸಿ ಪರಿಪಾಲನೆಯ ಮಾದರಿಯನ್ನೇ ನೀಡಿದ್ದ ಈ ಮಹಾನ್ ನಾಯಕನ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಬಿಜೆಪಿ ಅಧ್ಯಕ್ಷ ವಳಲಳ್ಳಿ ಅಶ್ವತ್, ಸಕಲೇಶಪುರ ಮಂಡಲದ ಬಿಜೆಪಿ ಪದಾಧಿಕಾರಿಗಳು, ಪುರಸಭೆ ಸದಸ್ಯರು, ಸರ್ಕಾರದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

# ವಿಮೆ ಯೋಜನೆ ಪ್ರಯೋಜನ ಪಡೆಯಿರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಧಾರಾಕಾರ ಮಳೆಯಿಂದ ತಾಲ್ಲೂಕಿನ ಎಲ್ಲಾ ಬೆಳೆಗಳು ನೆಲಕಚ್ಚಿದ್ದು ಹಾಕಿದ ಬಂಡವಾಳ ಸಹ ವಾಪಸ್ ಬರುತ್ತಿಲ್ಲ, ರೈತ ಸುರಕ್ಷಾ ಫಸಲ್ ಬಿಮಾ ಯೋಜನೆಗೆ ಅರ್ಜಿ ಸಲ್ಲಿಸಿ ಪರಿಹಾರ ಪಡೆಯಲು ಮುಂದಾಗಬೇಕು ಎಂದು ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.

ಪಟ್ಟಣದ ಕೃಷಿ ಸಹಾಯಕ ನಿರ್ದೇಶಕರ ಕಚೇರಿ ಆವರಣದಲ್ಲಿ ಶುಕ್ರವಾರ ರೈತ ಸುರಕ್ಷಾ ಫಸಲ್ ಬಿಮಾ ಯೋಜನೆ ಹಾಗೂ ಬೆಳೆ ಸಮೀಕ್ಷೆ ಯೋಜನೆ ಪ್ರಚಾರ ಮತ್ತು ಕೃಷಿ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ತಾಲ್ಲೂಕಿನ 26 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ ಸಂಚಾರ ಮಾಹಿತಿ ರಥಕ್ಕೆ ಚಾಲನೆ ನೀಡಿ ಮಾತನಾಡಿ, ತಾಲ್ಲೂಕಿನಲ್ಲಿ ವಿಪರೀತ ಮಳೆಯಿಂದ ಅತಿವೃಷ್ಟಿ ಸಂಭವಿಸುತ್ತಿದೆ. ಕರಿಮೆಣಸು, ಅಡಿಕೆ, ಕಾಫಿ, ಭತ್ತ ಮತ್ತು ಇತರ ಬೆಳೆಗಳು ಮಳೆಯಿಂದ ಹಾನಿಗೊಳಗಾಗುತ್ತಿವೆ. ರೈತರು ಬೆಳೆಗೆ ಹಾಕಿದ ಮೂಲ ಬಂಡವಾಳವೂ ಸಿಗದೆ ಅತಂತ್ರರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಒಂದು ವರದಾನವಾಗಿದೆ. ಕೃಷಿ, ತೋಟಗಾರಿಕೆ



ಮತ್ತು ಕಂದಾಯ ಇಲಾಖೆಗಳಿಂದ ಬೆಳೆ ವಿಮೆ, ಬೆಳೆ ಸಮೀಕ್ಷೆ ಮತ್ತು ಇತರೆ ಯೋಜನೆಗಳ ಬಗ್ಗೆ ರೈತರು ಮಾಹಿತಿ ಹೊಂದಿ ಯೋಜನೆಗಳ ಹೆಚ್ಚು ಅನುಕೂಲ ಪಡೆಯಬೇಕು ಎಂದು ತಿಳಿಸಿದರು.

ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಯು.ಎಂ. ಪ್ರಕಾಶ್ ಕುಮಾರ್ ಮಾತನಾಡಿ, ತಾಲ್ಲೂಕಿನಲ್ಲಿ ವಾರ್ಷಿಕ ಸರಾಸರಿ ಮಳೆ 2247 ಮಿ.ಮೀ. ಇದ್ದು 2024-25ನೇ ಸಾಲಿನಲ್ಲಿ 3842 ಮಿ.ಮೀ. ಸುರಿದಿದೆ. ಹೆತ್ತೂರು ಮತ್ತು ಯಸಳೂರು ಹೋಬಳಿಗಳಲ್ಲಿ 4857 ಮತ್ತು 3494 ಮಿ.ಮೀ. ಮಳೆಯಾಗಿದೆ. 2025-26ರ ಮೇ ಮತ್ತು ಈ ವರೆಗೆ 536 ಮಿ.ಮೀ. ವಾಡಿಕೆ ಮಳೆಯಿದ್ದು 1705 ಮಿ.ಮೀ. ಸುರಿದು ಮೂರು ಪಟ್ಟು ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.

ಬೆಳೆ ವಿಮೆ ಯೋಜನೆ ರೈತರಿಗೆ ಉಪಯುಕ್ತವಾಗಿದ್ದು, ಪ್ರತಿ ಎಕರೆ ಮಳೆಯಾಶ್ರಿತ ಭತ್ತ ಬೆಳೆಗೆ 516 ರೂ. ಭತ್ತ (ನೀರಾವರಿ) 755 ರೂ., ಕಾಳು ಮೆಣಸು ಬೆಳೆಗೆ 940 ರೂ. ಮತ್ತು ಅಡಿಕೆ ಬೆಳೆಗೆ 2560 ರೂ. ವಿಮೆ ಕಂತು ಕಟ್ಟಬೇಕು. ಅಡಿಕೆ ಮತ್ತು ಕಾಳುಮೆಣಸು ಬೆಳೆಗೆ ವಿಮೆ ಕಂತು ಕಟ್ಟಲು ಜೂ. 30 ಕಡೆಯ ದಿನವಾಗಿದೆ. ಭತ್ತ ಬೆಳೆಗೆ ಜುಲೈ 31ರ ವರೆಗೆ ವಿಮೆ ಕಟ್ಟಬಹುದು. ರೈತರು ಕಾರ್ಯಕ್ರಮದ ಪ್ರಯೋಜನ ಪಡೆಯಬೇಕೆಂದರು.

ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್, ಕೃಷಿ ಅಧಿಕಾರಿ ಕೇಶವಮೂರ್ತಿ, ಕಾಫಿ ಮಂಡಳಿ ಅಧಿಕಾರಿ ಬಸವರಾಜು, ತೋಟಗಾರಿಕೆ ಅಧಿಕಾರಿ ನಿತಿನ್, ಅಧೀಕ್ಷಕ ಮಲ್ಲಿಕಾರ್ಜುನ್, ದೊರೆಸ್ವಾಮಿ, ತಾಂತ್ರಿಕ ವ್ಯವಸ್ಥಾಪಕ ಶ್ರವಣ್, ಸುಷ್ಮಾ, ಅಭಿಲಾಷ್ ಹಾಗೂ ಇತರರಿದ್ದರು.

# ಕಟ್ಟೇಪುರ ಎಡದಂಡೆ ನಾಲೆಗೆ ಹರಿಯದ ನೀರು

## ನೀರಾವರಿ ಸೌಲಭ್ಯದಿಂದ ರೈತರು ವಂಚಿತ | ಸಾಕಾರಗೊಳ್ಳದ ದಶಕಗಳ ಕನಸು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಕಲಗೂಡು: ತಾಲ್ಲೂಕಿನ ಕಟ್ಟೇಪುರ ಎಡದಂಡೆ ನಾಲಾ ವ್ಯಾಪ್ತಿಯ ಅಚ್ಚುಕಟ್ಟು ಜಮೀನಿಗೆ ಬೇಸಿಗೆಯಲ್ಲಿ ಅರೆ ನೀರಾವರಿ ಸೌಲಭ್ಯ ಕಲ್ಪಿಸದ ಪರಿಣಾಮ ಬೆಳೆಯಿಲ್ಲದೆ ರೈತರು ಆರ್ಥಿಕವಾಗಿ ಅಪಾರ ನಷ್ಟ ಅನುಭವಿಸುವಂತಾಗಿದೆ.

ಮೈಸೂರು ಅರಸರ ಕಾಲದಲ್ಲಿ ಕಟ್ಟೇಪುರ ಬಳಿ ಹರಿಯುವ ಕಾವೇರಿ ನದಿಗೆ ಮೊದಲ ಬಾರಿಗೆ ಕಟ್ಟಿದ ಅಣೆಕಟ್ಟೆಗೆ ಎಡ ಮತ್ತು ಬಲದಂಡೆ ನಾಲೆ ನಿರ್ಮಿಸಲಾಗಿದೆ. ಬಲದಂಡೆ ನಾಲೆ ವ್ಯಾಪ್ತಿಗೆ 9 ಸಾವಿರ ಹೆಕ್ಟೇರ್ ಹಾಗೂ ಎಡದಂಡೆ ನಾಲೆಗೆ 4 ಸಾವಿರ ಹೆಕ್ಟೇರ್ ಜಮೀನು ಹೊಂದಿದೆ. ಬಲದಂಡೆ ನಾಲೆಗೆ ಬೇಸಿಗೆ ಕಾಲದಲ್ಲಿ ಒಂದೆರಡು ಸಲ ನೀರು ಹರಿಸಲಾಗುತ್ತಿದೆ. ಅದರಿಂದ ರೈತರು ಬಿತ್ತಿದ ನೆಲಗಡಲೆ, ತಂಬಾಕು, ಅಲಸಂದೆ, ಉದ್ದು ಹೆಸರು ಮತ್ತಿತರ ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯಲು ಅನುಕೂಲವಾಗಿದೆ. ಆದರೆ ಎಡದಂಡೆ ನಾಲೆಗೆ ಈ ಬಾರಿ ಬೇಸಿಗೆಯಲ್ಲಿ ಒಮ್ಮೆಯೂ ನೀರು ಹರಿಸಿಲ್ಲ. ಹೀಗಾಗಿ ರೈತರು ಅಕಾಲಿಕ ಮಳೆಯನ್ನೇ ನೆಚ್ಚಿಕೊಂಡು ಬೆಳೆ ಬೆಳೆದು ಆರ್ಥಿಕವಾಗಿ ಕೈ ಸುಟ್ಟುಕೊಳ್ಳುವಂತಾಗಿದೆ.

ತಂಬಾಕು, ದ್ವಿದಳಧಾನ್ಯ ಬೆಳೆಗೆ ಹಾನಿ: ಈ ಬಾರಿ ಎಡದಂಡೆ ನಾಲಾ ವ್ಯಾಪ್ತಿಯಲ್ಲಿ ಸಾಕಷ್ಟು ರೈತರು ಮುಂಗಾರು ಪೂರ್ವ ಬಿದ್ದ ಮಳೆಗೆ ತಂಬಾಕು ಬೆಳೆ ಬೆಳೆದಿದ್ದಾರೆ. ಕಳೆದ ಒಂದು ತಿಂಗಳಿಂದ ನಿರಂತರವಾಗಿ ಸುರಿದ ಮಳೆಗೆ ತೇವಾಂಶದಿಂದ ನಾಟಿ ಮಾಡಿದ ಗಿಡಗಳು ಬೇರು ಕೊಳೆತು ಬೆಳೆ ಕಳೆದುಕೊಳ್ಳುವಂತಾಗಿದೆ. ನಾಲೆಗೆ ಬೇಸಿಗೆಯಲ್ಲಿ ನೀರು ಹರಿಸಿದ್ದರೆ ರೈತರು ಸಕಾಲದಲ್ಲಿ ತಂಬಾಕು ನಾಟಿ ಕಾರ್ಯ ನಡೆಸಿ ಬೆಳೆ ಬೆಳೆಯಲು ಅನುಕೂಲ ಆಗುತ್ತಿತ್ತು. ಪ್ರತಿವರ್ಷ ಅಕಾಲಿಕ ಮಳೆಯನ್ನೇ ಅವಲಂಬಿಸಿ ನಾಟಿ ಮಾಡುತ್ತಿರುವ ಪರಿಣಾಮ ಸಕಾಲದಲ್ಲಿ ಇಳುವರಿ ಸಿಗದೆ ತಂಬಾಕು ಉತ್ಪಾದಿಸಲಾಗದೆ ಆರ್ಥಿಕವಾಗಿ ರೈತರ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಕಟ್ಟೇಪುರ ನಾಲೆಗಳಿಗೆ ನೀರಿಲ್ಲ: ಕಾವೇರಿ ನದಿ ಹಾದು ಹೋಗಿರುವ ಕಟ್ಟೇಪುರ ಅಣೆಕಟ್ಟೆ ನಂತರ ಸಿಗುವ ಕೆಳಭಾಗದ ಬಳ್ಳೂರು ಅಣೆಕಟ್ಟೆ ಹಾಗೂ ಚುಂಚನಕಟ್ಟೆ ಅಣೆಕಟ್ಟೆ ವ್ಯಾಪ್ತಿಯ ನಾಲೆಗಳಿಗೆ ಬೇಸಿಗೆ ಬೆಳೆಗೆ ನೀರು ಹರಿಸಲಾಗುತ್ತಿದೆ. ಈಗಲೂ ನದಿಗೆ ಹರಿಯುವ ನೀರಿಗಿಂತ ಹೆಚ್ಚಾಗಿ ಅಣೆಕಟ್ಟೆ ಬಳಿ ತಡೆಯೊಡ್ಡಿ ನಾಲೆ ತುಂಬಲೂ ನೀರು ಹರಿಸಲಾಗುತ್ತಿದೆ. ಅದರಿಂದ ಆ ಭಾಗದ ರೈತರು ಎರಡು ಬೆಳೆಗಳನ್ನು ಬೆಳೆಯಲು ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಆದರೆ ನದಿ ಕೆಳ ಭಾಗದ ನಾಲೆಗಳಿಗೆ ಹರಿಯುವ ನೀರು ಮೇಲ್ಭಾಗದ ಕಟ್ಟೇಪುರ ನಾಲೆ ವ್ಯಾಪ್ತಿಯ ಕೊಣನೂರು, ಹೊಸಹಳ್ಳಿ, ಕೂಡಲೂರು, ರಾಮನಾಥಪುರ, ಶಿರದನಹಳ್ಳಿ, ಮೂಲೇಹೊಸಹಳ್ಳಿ, ಬಸವಾಪಟ್ಟಣ, ಕೇರಳಾಪುರ, ಬಸವನಹಳ್ಳಿ, ಬೆಟ್ಟಸೋಗೆ ಭಾಗದ ನೂರಾರು ಎಕರೆ ಜಮೀನಿಗೆ ಬೇಸಿಗೆಯಲ್ಲಿ ನೀರು ಇಲ್ಲದಂತಾಗಿದೆ.

ಅತಿವೃಷ್ಟಿಗೆ ನೆಲಕಚ್ಚಿದ ಬೆಳೆ: ಈ ಬಾರಿ ಉಂಟಾದ ಅತಿವೃಷ್ಟಿ ಸಮಯದಲ್ಲಿ ಬಿತ್ತಿದ ತಂಬಾಕು, ಮೆಕ್ಕೆಜೋಳ, ಅಲಸಂದೆ, ಉದ್ದು ಹೆಸರು ಇನ್ನಿತರ ದ್ವಿದಳ ಧಾನ್ಯ ಬೆಳೆಗಳು ಮಳೆಗೆ ಸಿಲುಕಿ ನೆಲಬಿಟ್ಟು ಮೇಲೆಳಲಾಗದೆ ಮಣ್ಣುಪಾಲಾಗಿರುವುದು ಕಂಡುಬಂದಿದೆ. ನಾಲೆಗೆ ಅರೆ ನೀರಾವರಿ ಸೌಲಭ್ಯ ಕಲ್ಪಿಸಿದ್ದರೆ ರೈತರು ಹದವರಿತು ಬೆಳೆಗಳನ್ನು ಬಿತ್ತಲು ಸಹಕಾರಿಯಾಗುತ್ತಿತ್ತು. ಆದರೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿ ನಿರ್ಲಕ್ಷ್ಯ ಧೋರಣೆಯಿಂದಾಗಿ ಅರೆ ನೀರಾವರಿ ಸೌಲಭ್ಯದಿಂದ ವಂಚಿತರಾಗುವಂತಾಗಿದೆ.

ಮರಣ ಶಾಸನವಾದ ವಿದ್ಯುತ್ ಘಟಕ: ಕಟ್ಟೇಪುರ ಅಣೆಕಟ್ಟೆಗೆ ಎಡದಂಡೆ ನಾಲೆ ಬಳಿ ದಶಕದ ಹಿಂದೆ ನಿರ್ಮಿಸಿರುವ ಕಿರು ವಿದ್ಯುತ್ ಉತ್ಪಾದನಾ ಘಟಕ ನಾಲಾ ವ್ಯಾಪ್ತಿಯ ರೈತರಿಗೆ ಕಂಟಕವಾಗಿ ಪರಿಣಮಿಸಿತು. ಹಳೆಯ ಎಡದಂಡೆ ನಾಲೆಯ ಬಳಿ ವಿದ್ಯುತ್ ಉದ್ಪಾದನಾ ಘಟಕ ಸ್ಥಾಪಿಸಲಾಗಿದೆ. ವಿದ್ಯುತ್ ಉತ್ಪಾದನಾ ಘಟಕದ ಮೇಲ್ಭಾಗಕ್ಕೆ ನಾಲೆ ಸ್ಥಳಾಂತರಿಸಲಾಯಿತು. ಪರಿಣಾಮ ಬೇಸಿಗೆ ಸಮಯದಲ್ಲಿ ನದಿ ನೀರು ಇಳಿಕೆಯಾಗಿ ನಾಲೆಗೆ ಸಮರ್ಪಕವಾಗಿ ನೀರು ಹತ್ತದಂತ್ತಾಯಿತು. ಮಳೆಗಾಲದಲ್ಲಿ ಜುಲೈ ತಿಂಗಳ ನಂತರ ಭತ್ತದ ಬೆಳೆಗೆ ನೀರು ಹರಿಸಲಾಗುತ್ತಿದೆ. ಬೇಸಿಗೆ ಸಮಯದಲ್ಲಿ ನಾಲೆಗೆ ನೀರು ಹರಿಸುವುದು ಮರೀಚಿಕೆಯಾಗಿದೆ.

> ಕಟ್ಟೇಪುರ ಎಡದಂಡೆ ನಾಲೆಗೆ ಬೇಸಿಗೆಯಲ್ಲಿ ನೀರು ಹರಿಸುವ ಕುರಿತು ಮಾಹಿತಿ ಇಲ್ಲ. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು. ಸದ್ಯದಲ್ಲೇ ನಾಲೆ ನಿರ್ವಹಣೆ ಕೆಲಸ ಕೈಗೆತ್ತಿಕೊಳ್ಳಲಾಗುವುದು.
>
> -ಮಂಜುನಾಥ್, ಎಇಇ,
> ಹಾರಂಗಿ ಪುನರ್ವಸತಿ ಉಪವಿಭಾಗ ಕೊಣನೂರು



## ರಂಗನಾಥಪುರದಲ್ಲಿ ಚಿರತೆ ಪ್ರತ್ಯಕ್ಷ: ಆತಂಕ



ಕೊಣನೂರು: ಅರಕಲಗೂಡು ತಾಲ್ಲೂಕಿನ ಕೊಣನೂರು ಹೋಬಳಿ ರಂಗನಾಥಪುರ ಗ್ರಾಮ ವ್ಯಾಪ್ತಿಯಲ್ಲಿ ಚಿರತೆ ಕಾಣಿಸಿಕೊಂಡಿದ್ದು ಸಾರ್ವಜನಿಕರು ಭಯಭೀತರಾಗಿದ್ದಾರೆ.

ರಾಜ್ಯ ಹೆದ್ದಾರಿ ಪಕ್ಕದ ಗ್ರಾಮಗಳಾದ ಸಿದ್ದಾಪುರ, ಬಿಸಲಹಳ್ಳಿ, ರಂಗನಾಥಪುರ ವ್ಯಾಪ್ತಿಯಲ್ಲಿ ಕಳೆದ ಹಲವು ದಿನಗಳಿಂದ ಚಿರತೆ ಓಡಾಟ ಹೆಚ್ಚಿದೆ. ರೈತರು ಜಮೀನುಗಳಿಗೆ ತೆರಳಲು ಭಯಪಡುತ್ತಿದ್ದಾರೆ. ಹಗಲು ವೇಳೆಯಲ್ಲೇ ಕಲ್ಲು ಬಂಡೆಗ'ಳ ಮೇಲೆ ಕುಳಿತುಕೊಳ್ಳುವ ಚಿರತೆ ಜನರು ಕಾಣಿಸಿಕೊಳ್ಳುತ್ತಿದ್ದಂತೆ ಓಡಿ ಹೋಗುತ್ತದೆ. ಯಾವಾಗ ದಾಳಿ ಮಾಡುತ್ತದೆಯೋ ಎಂಬ ಭಯದಲ್ಲೇ ಜನರಿದ್ದಾರೆ.

ಎರಡು ವರ್ಷಗಳ ಹಿಂದೆ ಅರಣ್ಯ ಇಲಾಖೆಯವರು ಬೋನು ಇಟ್ಟು ಒಂದು ಚಿರತೆ ಸೆರೆ ಹಿಡಿದಿದ್ದರು. ಕಳೆದ ವರ್ಷ ಹಾರಂಗಿ ನಾಲೆಯಲ್ಲಿ ಚಿರತೆ ಮರಿ ಸೆರೆಯಾಗಿತ್ತು. ಆ ಬಳಿಕ ಚಿರತೆಗಳ ಓಡಾಟ ಹೆಚ್ಚಾಗಿದ್ದು ಅರಣ್ಯ ಇಲಾಖೆ ಗಮನ ಹರಿಸುತ್ತಿಲ್ಲ. ಈ ಕುರಿತು ಅನೇಕ ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ರೈತರು ಆರೋಪಿಸಿದ್ದಾರೆ. ರಂಗನಾಥಪುರದ ಕಲ್ಲು ಪೊಟರೆಯಲ್ಲಿ ಚಿರತೆ ಅಡಗಿ ಕುಳಿತಿರುವ ವಿಡಿಯೋ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ.

## ವ್ಯಸನಮುಕ್ತ ರಾಷ್ಟ್ರ: ಸಂಕಲ್ಪಕ್ಕೆ ಕರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ನಗರದ ಅರಸೀಕೆರೆ ರಸ್ತೆಯಲ್ಲಿರುವ ಎಪಿಜೆ ಪದವಿ ಪೂರ್ವ ಕಾಲೇಜಿನಲ್ಲಿ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ನಶಾ ಮುಕ್ತ ಭಾರತ ಅಭಿಯಾನ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಡಿಯಲ್ಲಿ ಮತ್ತು ಭುವನೇಶ್ವರಿ ಮದ್ಯಪಾನ ಸೇವನಿಗಳ ಸಮಗ್ರ ಪುರ್ನವಸತಿ ಕೇಂದ್ರದ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಮಾದಕ ವಸ್ತುಗಳ ಸೇವನೆ, ಸಾಗಾಣಿಕೆ, ಮಾರಾಟ ಇವೆಲ್ಲವೂ ಅಪರಾಧವೇ. ಇದನ್ನು ತಡೆಗಟ್ಟಲು ಕೇವಲ ಕಾನೂನು, ಪೊಲೀಸ್, ಕೋರ್ಟ್, ಕಚೇರಿಗಳಿಂದ ಸಾಧ್ಯವಾಗದು ಎಂದರು. ಯುವ ಜನತೆ ಮಾದಕ ವಸ್ತುಗಳ ಬಗ್ಗೆ ಅರಿವು ಪಡೆದು ತಾವೂ ಸಹ ಮಾದಕ ವಸ್ತುಗಳಿಗೆ ಬಲಿಯಾಗದೆ, ವ್ಯಸನ ಮುಕ್ತ ರಾಷ್ಟ್ರವನ್ನಾಗಿ ಮಾಡಲು ಕೈ ಜೋಡಿಸಬೇಕೆಂದು ಕರೆ ನೀಡಿದರು.

ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಸೇವನೆ ಜಾಮೀನು ರಹಿತ ಅಪರಾಧವಾಗಿದೆ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಪದವಿ ಪೂರ್ವ ಶಿಕ್ಷಣದಲ್ಲಿ ಕಡಿಮೆ ಅಂಕಗಳಲ್ಲಿ ಉತ್ತೀರ್ಣನಾದೆ ಅಥವಾ ಅನುತ್ತೀರ್ಣನಾದನೆಂಬ ಕಾರಣಕ್ಕೆ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳದೆ, ಧೈರ್ಯದಿಂದ ಜೀವನ ನಡೆಸಲು ಪ್ರಪಂಚದಲ್ಲಿ ಸಾಕಷ್ಟು ಮಾರ್ಗ ಹಾಗೂ ಅವಕಾಶಗಳಿವೆ. ಅದನ್ನು ಸದುಪಯೋಗಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮ ಕೆ.ಆರ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸ್ವಂತ ನಿರ್ಧಾರ ತೆಗೆದು ಕೊಳ್ಳುವ ಶಕ್ತಿ ಇರುವುದಿಲ್ಲ. ಸಮಾಜದಲ್ಲಿ ಒಳ್ಳೆಯ ದಾರಿಗಳು ಎಷ್ಟಿವೆಯೋ, ಅಷ್ಟೇ ಕೆಟ್ಟ ದಾರಿಗಳಿದ್ದು, ವಿದ್ಯಾರ್ಥಿಗಳು ಉತ್ತಮರ ಸಂಘ, ಸರಿಯಾದ ಮಾರ್ಗದರ್ಶನದಲ್ಲಿ ನಡೆದು ಸಾಧನೆಯ ಗುರಿ ತಲುಪಬೇಕು.

ಸ್ವಾಸ್ಥ್ಯ ಸಮಾಜಕ್ಕೆ ವಿದ್ಯಾರ್ಥಿಗಳ ಪಾತ್ರ ಬಹಳ ಮುಖ್ಯವಾಗಿದೆ.

ಇದಕ್ಕೆ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು. ಅಂತಾರಾಷ್ಟ್ರೀಯ ವಿರೋಧಿ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗದೆ, ಪ್ರತಿ ದಿನ, ಕ್ಷಣ ವಿರೋಧಿಸುವ ದಿನಾಚರಣೆ ಆಗಬೇಕೆಂದರು.

ಭುವನೇಶ್ವರಿ ಮದ್ಯಪಾನ ಸೇವನಿಗಳ ಸಮಗ್ರ ಪುನರ್ವಸತಿ ಕೇಂದ್ರದ ವೈದ್ಯಾಧಿಕಾರಿ ನಂದ ಎಂ.ಎಸ್ ಉಪನ್ಯಾಸ ನೀಡಿ, ಯಾವುದೇ ಅಭ್ಯಾಸ ಮಿತಿ ಮೀರಿದರೆ ಚಟವಾಗಿ ಪರಿವರ್ತನೆಗೊಳ್ಳುತ್ತದೆ. ಕುತೂಹಲಕ್ಕೆ ಮಾದಕ ವಸ್ತುಗಳ ರುಚಿನೋಡಲು ಮುಂದಾಗಿ ವಿದ್ಯಾರ್ಥಿಗಳು ವ್ಯಸನಕ್ಕೆ ದಾಸರಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಎಪಿಜೆ ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕ ನಿರ್ದೇಶಕ ಮುರುಳಿ.ಡಿ, ಪ್ರಾಂಶುಪಾಲ ರಾಮಣ್ಣ.ವಿ ಹಾಗೂ ಇತರರಿದ್ದರು.

## ಪ್ರವಾಹ ಭೀತಿ ಪ್ರದೇಶಗಳಿಗೆ ತಾಪಂ ಇಓ ಭೇಟಿ



ಅರಕಲಗೂಡು: ಕುಶಾಲನಗರ ಹಾಗು ಅರಕಲಗೂಡು ತಾಲ್ಲೂಕಿನಾದ್ಯಂತ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿದ್ದು ಪ್ರವಾಹ ಭೀತಿ ಸ್ಥಳಗಳಿಗೆ ಗುರುವಾರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪಿ. ಶ್ರೀನಿವಾಸ್ ಭೇಟಿ ನೀಡಿ ಪರಿಶೀಲಿಸಿದರು.

ವ್ಯಾಪ್ತಿಯ ರಾಮನಾಥಪುರ, ಕೊಣನೂರು, ಬಸವಾಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಾದು ಹೋಗಿರುವ ಕಾವೇರಿ ನದಿಯು ಉಕ್ಕಿ ಹರಿಯುತ್ತಿದೆ. ನದಿ ದಂಡೆಯಲ್ಲಿರುವ ಕೆಲವು ಗ್ರಾಮಗಳಿಗೆ ಪ್ರವಾಹ ಭೀತಿ ಕಾಡುತ್ತಿದೆ.

ಪಿ. ಶ್ರೀನಿವಾಸ್ ಅವರು ಮಾತನಾಡಿ, ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ. ರಾಮಾನಾಥಪುರ, ಬಸವಾಪಟ್ಟಣ, ಕೊಣನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಕ್ಕೆ ಭೇಟಿ ನೀಡಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ನಿಯೋಜನೆ ಮಾಡಲು ಹಾಗು ಸುರಕ್ಷಿತ ಸ್ಥಳಕ್ಕೆ ಜನರನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಲ್ಲೂಕು ಪಂಚಾಯಿತಿ ಸಿಬ್ಬಂದಿ ಶೇಖರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಮಾರಸ್ವಾಮಿ, ಕಾರ್ಯದರ್ಶಿ ರೇವಣ್ಣ, ಗ್ರಾ.ಪಂ. ಉಪಾಧ್ಯಕ್ಷ ಮಾದೇಶ್, ಸದಸ್ಯ ಸುನಿಲ್, ಕುಮಾರ್ ಇದ್ದರು.

## ಶೇ. 30 ರಷ್ಟು ಕಾಫಿ ಬೆಳೆಗೆ ಕೊಳೆ ರೋಗ: ಪರಿಹಾರಕ್ಕೆ ಮನವಿ



ಹಾಸನ: ನಿರಂತರ ಮಳೆಯಿಂದ ಶೇ. 30 ರಷ್ಟು ಕಾಫಿ ಬೆಳೆ ಕೊಳೆ ರೋಗಕ್ಕೆ ತುತ್ತಾಗಿದ್ದು ಸರ್ಕಾರ ಬೆಳೆಗಾರರ ನೆರವಿಗೆ ಧಾವಿಸಬೇಕು. ಹೆಕ್ಟೇರ್‌ಗೆ ಕನಿಷ್ಠ 1 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಜಿಲ್ಲಾ ಪ್ಲಾಂಟರ್ಸ್ ಸಂಘದ ರಾಜ್ಯ ಪ್ರತಿನಿಧಿ ಟಿ.ಪಿ. ಸುರೇಂದ್ರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಜೋರಾಗಿದ್ದರಿಂದ ಕಾಫಿ ಬೆಳೆಗಾರರಿಗೆ ದಿಕ್ಕು ತೋಚದಂತಾಗಿದೆ. ವಾಡಿಕೆಗಿಂತ ಅಧಿಕ ಮಳೆಯಾಗಿದ್ದರಿಂದ ಭಾರೀ ಸಮಸ್ಯೆಯಾಗಿದೆ ಎಂದರು.

ಅಡಿಕೆ ಹಾಗೂ ಕಾಳು ಮೆಣಸು ಬೆಳೆಯನ್ನು ಕೇಂದ್ರ ಸರ್ಕಾರ ಪ್ರಧಾನ್ ಮಂತ್ರಿ ಫಸಲ್ ಬೀಮಾ ಯೋಜನೆ ವ್ಯಾಪ್ತಿಗೆ ಸೇರಿಸಿದೆ. ನಷ್ಟ ಪರಿಹಾರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆಯಾದರೂ ಸರ್ವರ್ ಸಮಸ್ಯೆಯಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ಜಿಲ್ಲಾಡಳಿತ ಅವಧಿ ವಿಸ್ತರಿಸಬೇಕು. ಜೊತೆಗೆ ಕಾಫಿ ಬೆಳೆಯನ್ನು ವಿಮೆ ವ್ಯಾಪ್ತಿಗೆ ಒಳಪಡಿಸಿ ಹೆಕ್ಟೇರ್‌ಗೆ ಕನಿಷ್ಠ 1 ಲಕ್ಷ ರೂ. ಪರಿಹಾರ ಕಲ್ಪಿಸಬೇಕು. ಪ್ರಸ್ತುತ ಎನ್‌ಡಿಆರ್‌ಎಫ್ ಅಡಿಯಲ್ಲಿ ಪ್ರತಿ ಬೆಳೆಗಾರರಿಗೆ ಎರಡು ಹೆಕ್ಟೇರ್‌ಗೆ 36 ಸಾವಿರ ರೂ. ಮಾತ್ರ ನೀಡಲಾಗುತ್ತದೆ. ಆದರೆ ಇಷ್ಟು ಕಡಿಮೆ ಪರಿಹಾರ ಯಾವುದಕ್ಕೂ ಸಾಲುವುದಿಲ್ಲ ಎಂದರು.

ವಿದೇಶಿ ವಿನಿಯಮದಲ್ಲಿ ಕಾಫಿ ಕೊಡುಗೆ ಸುಮಾರು 15 ಸಾವಿರ ಕೋಟಿ ರೂ. ಇದೆ. 15 ಲಕ್ಷ ಕಾರ್ಮಿಕರು ಈ ಉದ್ಯಮವನ್ನೇ ಅವಲಂಬಿಸಿದ್ದಾರೆ. ಕಾಫಿ ಮಂಡಳಿ ಹಾಗು ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ಒದಗಿಸಿಕೊಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಎ.ಎಸ್. ಪರಮೇಶ್, ಗೌರವ ಕಾರ್ಯದರ್ಶಿ ಕೆ.ಬಿ. ಲೋಹಿತ್, ಪದಾಧಿಕಾರಿಗಳಾದ ಸಚಿನ್, ಮೇಘರಾಜ್ ಇದ್ದರು.

## ಕಸಾಪ ಗೌರವ ಕಾರ್ಯದರ್ಶಿಯಾಗಿ ಮಲ್ಲೇಶಗೌಡ ನೇಮಕ



ಹಾಸನ: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿಯಾಗಿ ಕಸಾಪ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ ಅವರನ್ನು ನೇಮಕ ಮಾಡಲಾಗಿದೆ. ಡಾ. ಪದ್ಮಿನಿ ನಾಗರಾಜು ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಡಾ. ಮಲ್ಲೇಶಗೌಡ ಅವರನ್ನು ಪರಿಗಣಿಸಲಾಗಿದೆ. ಜೂ. 29 ರಂದು ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆ ನಡೆಯಲಿರುವುದರಿಂದ ನೇಮಕ ಮಾಡಲಾಗಿದೆ ಎಂದು ಪರಿಷತ್ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಶಿ ತಿಳಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಜೂನ್-28

**1914:** ಆರ್ಚ್‌ಡ್ಯೂಕ್ ಫ್ರಾಂಜ್ ಫರ್ಡಿನ್ಯಾಂಡ್ ಮತ್ತು ಅವರ ಪತ್ನಿಯನ್ನು ಗಾವ್ರಿಲೋ ಪ್ರಿಂಸಿಪ್ ಹತ್ಯೆ ಮಾಡಿದರು. ಇದರ ಪರಿಣಾಮವಾಗಿ ಮೊದಲ ಮಹಾಯುದ್ಧ (ಪ್ರಥಮ ವಿಶ್ವಯುದ್ಧ) ಆರಂಭವಾಯಿತು.

**1919:** ಪ್ರಥಮ ಮಹಾಯುದ್ಧದ ಕೊನೆಗೆ ವರ್ಸಾಯ್ಸ್ ಒಪ್ಪಂದ ಆಯಿತು. ಇದು ಜರ್ಮನಿಗೆ ಕಠಿಣ ಷರತ್ತುಗಳನ್ನು ವಿಧಿಸಿತು.

**1956:** ನೂತನ ತೆಲುಗು ಚಲನಚಿತ್ರ ಮಾಯಾಬಜಾರ್ ಬಿಡುಗಡೆಯಾಯಿತು. ಇದು ನಂತರ ಸಾಂಸ್ಕೃತಿಕ ಪಾಠವಾಗಿ ಗುರುತಿಸಲ್ಪಟ್ಟಿತು.

**1997:** ಜಮ್ಮು ಮತ್ತು ಕಾಶ್ಮೀರದ ಪುಲ್ವಾಮದಲ್ಲಿ ಉಗ್ರರ ದಾಳಿಯಲ್ಲಿ 8 ಮಂದಿ ಭಾರತೀಯ ಯೋಧರು ಹತರಾದರು.

**ಜನನ**

**1491:** ಹೆನ್ರಿ, ಇಂಗ್ಲೆಂಡ್‌ನ ರಾಜ
**1577:** ಪೀಟರ್ ಪಾವುಲ್ ರೂಬೆನ್ಸ್, ಫ್ಲೆಮಿಶ್ ಚಿತ್ರಕಾರ
**1712:** ಜೀನ್-ಜಾಕ್ ರೂಸೋ, ಸ್ವಿಸ್ ದಾರ್ಶನಿಕ ಮತ್ತು ರಾಜಕೀಯ ಚಿಂತಕ

**ಮರಣ**

**1836:** ಜೇಮ್ಸ್ ಮ್ಯಾಡಿಸನ್, ಅಮೆರಿಕದ 4ನೇ ರಾಷ್ಟ್ರಪತಿ.
**2001:** ಜೋ ಹ್ಯಾಂಡರ್, ಪ್ರಸಿದ್ಧ ಅಮೆರಿಕನ್ ವಿಜ್ಞಾನ ಕಾದಂಬರಿಕಾರ

## ಕಳೆ ನಾಶಕ ಔಷಧ ಸಿಂಪಡಣೆಗೆ ಬಂತು ಡ್ರೋನ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಕೃಷಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತಿರುವ ರೈತರು ಬೆಳೆಗಳಿಗೆ ಕ್ರಿಮಿನಾಶಕ ಔಷಧ ಸಿಂಪಡಣೆಗಾಗಿ ಡ್ರೋನ್ ಮೊರೆ ಹೋಗಿದ್ದಾರೆ.

ಕೂಲಿ ಕಾರ್ಮಿಕರ ಸಮಸ್ಯೆ, ಸಮಯ ಹಾಗೂ ಹಣ ಉಳಿತಾಯ, ನ್ಯಾನೋ ಗೊಬ್ಬರ ಸಿಂಪಡಣೆ ಹೀಗೆ ಹತ್ತಾರು ಕಾರಣಗಳಿಂದಾಗಿ ಡ್ರೋನ್ ನೆರವಾಗುತ್ತದೆ ಎಂಬ ನಂಬಿಕೆ ರೈತರದ್ದಾಗಿದೆ.

ಇತ್ತೀಚಿನ ದಿನಗಳಲ್ಲಿ ಹೈಬ್ರಿಡ್ ತಂತ್ರಜ್ಞಾನ, ಕುಲಾಂತರಿ ಬಿತ್ತನೆ ಬೀಜಗಳ ಬಳಕೆಯಿಂದ ಬಹುತೇಕ ಬೆಳೆಗಳಿಂದ ಔಷಧಿ ಸಿಂಪಡಣೆ ಇಲ್ಲದೆ ಫಸಲು ಪಡೆಯಲು ಸಾಧ್ಯವಿಲ್ಲ ಎಂಬಂತಹ ಪರಿಸ್ಥಿತಿಯಿದೆ.

ಈ ನಿಟ್ಟಿನಲ್ಲಿ ರೈತರಿಗೆ ಔಷಧ ಸಿಂಪಡಣೆ ಸವಾಲಾಗಿರುವ ಕಾಲಘಟ್ಟದಲ್ಲಿ ಡ್ರೋನ್ ತಂತ್ರಜ್ಞಾನ ಪ್ರಯೋಜವಾಗಿದೆ ಎನ್ನಲಾಗಿದೆ.

### ಡ್ರೋನ್ ಬಳಕೆ ನಿಷಿದ್ಧ

ಬೆಳೆಗಳ ಕಳೆ ನಾಶಕಕ್ಕೆ ಡ್ರೋನ್ ಮೂಲಕ ಔಷಧ ಸಿಂಪಡಣೆ ಮಾಡುವುದು ನಿಷಿದ್ಧ ಎಂದು ಜಂಟಿ ಕೃಷಿ ನಿರ್ದೇಶಕ ಪಿ. ರಮೇಶ್‌ಕುಮಾರ್ ಹೇಳಿದರು. ಕೃಷಿಯಲ್ಲಿ ಡ್ರೋನ್ ಬಳಸುವ ಕುರಿತುಯಾವ ಸಂಶೋಧನೆಗಳು ದೃಢಪಡಿಸಿಲ್ಲ. 500 ಮೀಟರ್ ಎತ್ತರದಿಂದ ಕ್ರಿಮಿನಾಶಕ ಸಿಂಪಡಿಸುವುದಾಗಿ ಹೇಳುತ್ತಾರೆ. ಹೀಗೆ ಮಾಡುವುದರಿಂದ ಭೂಮಿಯ ಫಲವತ್ತತೆ ಹಾಳಾಗುತ್ತದೆ. ಜೊತೆಗೆ ಪಕ್ಕದ ಜಮೀನಿನ ಮೇಲೆ ಯಾವ ಪರಿಣಾಮ ಬೀರುತ್ತದೆಂಬುದು ಗೊತ್ತಿಲ್ಲ. ಡ್ರೋನ್ ಬಳಕೆ ಮಾಡುತ್ತಿರುವುದು ಕಂಡುಬಂದರೆ ತಕ್ಷಣವೇ ನಿಲ್ಲಿಸಿ ರೈತರಿಗೆ ಅರಿವು ಮೂಡಿಸಲಾಗುವುದು ಎಂದು ಅವರು ತಿಳಿಸಿದರು.

### ಎಕರೆಗೆ 500 ರೂ.

ಜಿಲ್ಲೆಯಲ್ಲಿ ಕಳೆನಾಶಕ ಔಷಧ ಸಿಂಪಡಣೆಗಾಗಿಯೇ 8 ಡ್ರೋನ್‌ಗಳು ಕಾರ್ಯನಿರ್ವಹಿಸುತ್ತಿವೆ. ನಮ್ಮ ಜಮೀನು ಮಾತ್ರವಲ್ಲದೆ ಬೇರೆಯವರ ಜಮೀನಿಗೂ ಎಕರೆಗೆ 500 ರೂ. ಬಾಡಿಗೆಯಂತೆ ಡ್ರೋನ್ ಮೂಲಕ ಔಷಧ ಸಿಂಪಡಣೆ ಮಾಡುತ್ತೇವೆ. ರೈತರಿಗೆ ಡ್ರೋನ್ ತಂತ್ರಜ್ಞಾನ ಪರಿಚಯಿಸಬೇಕೆಂದು ಇಫ್ಕೋ ಕಂಪನಿ ಸಹಯೋಗದಿಂದ 15 ಲಕ್ಷ ರೂ. ವೆಚ್ಚ ಮಾಡಿ ಡ್ರೋನ್ ತಂದಿದ್ದೇವೆ ಎಂದು ಬೇಲೂರು ತಾಲ್ಲೂಕಿನ ಕೊರಟಿಕೆರೆ ಗ್ರಾಮದ ಸತೀಶ್ ಅವರು ಹೇಳಿದರು. ಡ್ರೋನ್ ಬಳಸುವುದು ಅವೈಜ್ಞಾನಿಕವಾದರೂ ಅನಿವಾರ್ಯವಾಗಿದೆ. ಅಕ್ಕಪಕ್ಕದ ಜಮೀನಿನಲ್ಲಿ ಬೆಳೆದ ಬೆಳೆಗೆ ಹಾನಿಯಾಗದಂತೆ ಎಚ್ಚರ ವಹಿಸಲಾಗುವುದು. ರೈತರ ಒಪ್ಪಿಗೆ ಪಡೆದು ಕೆಲಸ ಮಾಡಲಾಗುತ್ತದೆ ಎಂದರು.

### 10 ನಿಮಿಷದಲ್ಲಿ ಒಂದು ಎಕರೆ

ಕೇವಲ ಹತ್ತು ನಿಮಿಷದಲ್ಲಿ ಒಂದು ಎಕರೆಗೆ ಡ್ರೋನ್‌ನಿಂದ ಕ್ರಿಮಿನಾಶಕ ಔಷಧ ಸಿಂಪಡಣೆ ಮಾಡಬಹುದು. ಎದೆ ಎತ್ತರಕ್ಕೆ ಬೆಳೆದ ನಿಂತ ಬೆಳೆಯಲ್ಲಿ ಕಳೆ ಕೀಳಲು ಕೂಲಿ ಕಾರ್ಮಿಕರನ್ನು ಅವಲಂಬಿಸಿದರೆ ಸಮಯ ಹೆಚ್ಚು ಬೇಕಾಗುತ್ತದೆ. ಇತ್ತೀಚಿನ ದಿನದಲ್ಲಿ ಮೆಕ್ಕೆ ಜೋಳಕ್ಕೆ ಬಿಳಿಸುಳಿ ರೋಗ ಬಾಧೆ, ಸೈನಿಕ ಹುಳು ಕಾಟ ಕಾಡುತ್ತಿದೆ. ಜೊತೆಗೆ ಮೆಣಸಿ ಗಿಡ, ತರಕಾರಿ ಬೆಳೆ, ಭತ್ತ ಹೀಗೆ ನಾನಾ ಬೆಳೆಗೆ ಕ್ರಿಮಿ ಕೀಟನಾಶಕ ಹಾಗು ಕಳೆನಾಶಕ ಸಿಂಪಡಣೆಗೆ ಡ್ರೋನ್ ಹೆಚ್ಚು ಬಳಕೆಯಾಗುತ್ತಿದೆ. ವಿಶೇಷವಾಗಿ ಅಡಿಕೆ ಬೆಳೆಗೆ ಕೊಳೆರೋಗ ಸೇರಿ ಮೈಕ್ರೋ ಕೀಟನಾಶಗಳ ಸಿಂಪಡಣೆಗೆ ಡ್ರೋನ್ ಸುಲಭ ಸಾಧನವಾಗಿದೆ.

ಸುಮಾರು 500 ಮೀಟರ್ ಅಂದರೆ ಅರ್ಧ ಕಿ.ಮೀ. ದೂರ ಅಂತರದ ನಿಯಂತ್ರಣವನ್ನು ಡ್ರೋನ್ ಪೈಲಟ್ ಮಾಡುತ್ತಾರೆ. ಅವರಿಗೆ ಸಹಾಯಕ ಪೈಲಟ್ ಒಬ್ಬರಿರುತ್ತಾರೆ. ಔಷಧಗಳನ್ನು ಸಿಂಪಡಣೆ ಮಾಡುವ ಮುನ್ನ ಉಪಗ್ರಹದ ಮೂಲಕ ಭೂಮಿಯನ್ನು ಜಿಪಿಎಸ್, ಇಂಟರ್‌ನೆಟ್ ಸಂಪರ್ಕ ಸಾಧಿಸಿ ಔಷಧ ತುಂಬಿದ ಡ್ರೋನ್ ಮೇಲೆಕ್ಕೆ ಹಾರುತ್ತಾ ಕೇವಲ ಹತ್ತು ನಿಮಿಷದಲ್ಲಿ ಒಂದು ಎಕರೆಯನ್ನು ಪೂರ್ಣ ಸಿಂಪಡಣೆ ಮಾಡುತ್ತದೆ. ಕಡಿಮೆ ನೀರು ಮತ್ತು ಸಮಪರ್ಕ ಔಷಧಿ ಬಳಕೆಯಿಂದ ರೈತರಿಗೆ ಭಾರೀ ಪ್ರಮಾಣದಲ್ಲಿ ಹಣ ಉಳಿತಾಯವಾಗುತ್ತದೆ. ಕೆಲ ಸಂದರ್ಭದಲ್ಲಿ ಔಷಧಿ ಸಿಂಪಡಣೆ ವೇಳೆ ವಿಷಜಂತುಗಳಿಂದ ಪಾರಾಗಲು ಡ್ರೋನ್ ಬಳಕೆ ಉತ್ತಮ ಎಂಬುದು ರೈತರ ಅಭಿಪ್ರಾಯವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248